ಬಣ್ಣದ ಲುಂಗಿ, ಹೆಗಲ ಮೇಲೆ ಹಾಕಿಕೊಂಡಿದ್ದ ಟವಲ್ಲನ್ನು ನೋಡಿ ಅವನು ಆ ಮನೆಯ ನೌಕರನೆಂದು ಧಾರಾಳವಾಗಿ ಹೇಳಬಹುದಿತ್ತು.

'ಓ....ರಮ್ಯ, ಬಾ ತಾಯಿ....' ಅವನು ಸಂಭ್ರಮದಿಂದ ಹಲ್ಕಿರಿದ. ಮುಂದಿನ ಎರಡು ಹಲ್ಲುಗಳು ಉದುರಿದ್ದವು ಆತನಿಗೆ.

'ಋತು, ಇವ್ನು ನಮ್ಮ ಮನೆಯ ಅಡಿಗೆಯವನು, ದೇವಣ್ಣ ಅಂತ....ನಾನು ಸಣ್ಣವಳಾಗಿದ್ದಾಗಿನಿಂದ್ಲೂ ಇವ್ನೇ ನಮ್ಮ ಮನೆಯ ಅಡಿಗೆಯವನು, ಆದ್ರೆ ಮನೆಯವನೇ ಆಗಿಬಿಟ್ಟಿದ್ದಾನೆ, ಇವನ ಕೈ ತುತ್ತು ತಿಂದೇ ಬೆಳೆದವಳು ನಾನು...' ಎಂದವಳು

'ದೇವಣ್ಣ, ಇವ್ಳು ನನ್ನ ಕ್ಲೋಸ್ ಫ್ರೆಂಡು, ಋತು ಅಂತ, ಆಗಾಗ ಹೇಳ್ತಿರ್ತೀನಲ್ಲ, ನಾಲ್ಕು ದಿನ ನಮ್ಮ ಮನೆಯಲ್ಲಿರಲು ಬಂದಿದ್ದಾಳೆ...' ಎಂದು ದೇವಣ್ಣನಿಗೆ ಪರಿಚಯ ಮಾಡಿಸಿದಳು.

'ಹೌದಾ ತಾಯಿ, ತುಂಬಾ ಸಂತೋಷ ಕಣಮ್ಮ, ತಾಯಿ ಇಲ್ಲದ ಮಗು ಈ ನಮ್ಮ ರಮ್ಯ, ಅವ್ಳು ಸಂತೋಷವಾಗಿದ್ರೆ ಸಾಕಮ್ಮಾ..' ಎಂದು ದೇವಣ್ಣ ಋತುವಿಗೆ ಕೈ ಮುಗಿದಾಗ ಪ್ರತಿಯಾಗಿ ಅವಳೂ ಕೈ ಮುಗಿದಳು.

ಮನೆಯ ನೌಕರನಾದರೂ ಎಷ್ಟು ಆತ್ಮೀಯತೆಯಿಂದಿದ್ದಾನೆ ಈತ. ಬೇಡವೆಂದರೂ ಕೋಟೆ ಬಂಗಲೆಯ ಚಂದ್ರಪ್ಪ, ಸುಂದರಿಯರ ನೆನಪಾಗಿ ಮನಸ್ಸು ಕಹಿಯಾಯಿತು ಋತುವಿಗೆ. ಪ್ರಕೃತಿಯ ಹೊರಭಾಗದಂತೆ ಒಳಭಾಗವೂ ಸುಂದರವಾಗಿತ್ತು. ಕೆಂಪು ಇಟ್ಟಿಗೆಗಳಲ್ಲೇ ಪೂರ್ತಿ ಮನೆಯನ್ನು ನಿರ್ಮಿಸಿದ್ದರು. ಕೆಳಭಾಗದಲ್ಲಿ ಒಂದು ರೂಮಿದ್ದರೆ ಮಹಡಿಯೇರಲು ಮೆಟ್ಟಿಲುಗಳಿದ್ದವು. ಎಲ್ಲ ಕಡೆಯೂ ಅಚ್ಚುಕಟ್ಟುತನ, ಕಲಾತ್ಮಕತೆ ಎದ್ದು ಕಾಣುತ್ತಿತ್ತು. ಹಜಾರ ದೊಡ್ಡದಾಗಿತ್ತು. ಕುಳಿತುಕೊಳ್ಳಲು ಬೆತ್ತದಿಂದ ಮಾಡಿದ ಆಸನಗಳಿದ್ದವು.

'ನೀವಿಬ್ರೂ ಕುಳಿತು ಸ್ವಲ್ಪ ಸುಧಾರಿಸಿಕೊಳ್ಳಿ, ಬಿಸಿಬಿಸಿಯಾಗಿ ಟೀ ಮಾಡಿಕೊಂಡು ಬರ್ತೀನಿ...' ಎಂದು ಅಡುಗೆ ಮನೆಯತ್ತ ನಡೆದ ದೇವಣ್ಣ ಐದೇ ನಿಮಿಷದಲ್ಲಿ ಹಬೆಯಾಡುವ ಟೀ ಕಪ್ಪುಗಳೊಂದಿಗೆ ಹಾಜರಾದ.

ಶುಂಠಿ, ಏಲಕ್ಕಿ ಬೆರೆಸಿ ಮಾಡಿದ ಮಸಾಲಾ ಟೀ ರುಚಿಕಟ್ಟಾಗಿತ್ತು. ಪ್ರಯಾಣದ ಆಯಾಸ ಆಗಲೇ ಕಡಿಮೆಯಾದಂತಿತ್ತು.

ಅವರಿಬ್ಬರ ಲಗೇಜುಗಳನ್ನು ಬೇಡವೆಂದರೂ ಮಹಡಿಗೆ ತಂದ ದೇವಣ್ಣ. ಮಹಡಿಯಲ್ಲಿ ಎದುರು ಬದುರಾಗಿ ಎರಡು ರೂಮುಗಳಿದ್ದವು. ನಡುವೆ ಪುಟ್ಟ ಹಜಾರವಿತ್ತು. ಅಲ್ಲಲ್ಲಿ ಪ್ರಕೃತಿಯ ನೈಸರ್ಗಿಕ ಚಿತ್ರಗಳ ಕಲಾಕೃತಿಗಳನ್ನು ಗೋಡೆಗೆ ತೂಗು ಹಾಕಲಾಗಿತ್ತು. ಹಜಾರಕ್ಕೆ ಸೇರಿದಂತೆ ಒಂದು ವಿಶಾಲವಾದ ಬಾಲ್ಕನಿಯಿತ್ತು.

'ನೀವು ಸುಧಾರಿಸಿಕೊಳ್ಳಿ. ಅಷ್ಟರಲ್ಲಿ ಬಿಸಿಬಿಸಿ ಊಟವೂ ರೆಡಿಯಾಗುತ್ತೆ, ಅಯ್ನೋರು ಪಕ್ಕದ ಮುದ್ದೇನಹಳ್ಳಿಗೆ ಹೋಗಿದ್ದಾರೆ, ಬರುವಾಗ ಲೇಟಾಗ್ಬಹುದು, ಹಾಗಾಗಿ ಊಟಕ್ಕೆ ಅವ್ರಿಗಾಗಿ ಕಾಯುವುದು ಬೇಡ ಎಂದಿದ್ದಾರೆ...' ಎಂದ ದೇವಣ್ಣ ಕೆಳಗಿಳಿದು ಹೋದ. ರಮ್ಯ ಅವನು ಹೋದತ್ತಲೇ ನೋಡಿದಳು.

'ಋತು, ಇಲ್ಲಿರುವ ಎರಡು ರೂಮ್‌ಗಳಲ್ಲಿ ಒಂದು ಅಪ್ಪಾಜೀದು, ಇನ್ನೊಂದು ನಂದು. ಮೇಲೆ ಒಂದು ಸೆಪರೇಟ್ ರೂಮ್ ಇದೆ, ಅಲ್ಲಿ ಯೋಗಾಭ್ಯಾಸ ಮಾಡ್ತಾರೆ ಅಪ್ಪಾಜಿ, ಸಾಮಾನ್ಯವಾಗಿ ನಾನು ಆ ರೂಮಿಗೆ ಹೋಗೋದು ತುಂಬಾ ಕಡಿಮೆ, ಒಮ್ಮೊಮ್ಮೆ ಅಪ್ಪಾಜಿಯ ಜೊತೆ ಅಲ್ಲಿಗೆ ಹೋಗ್ತೀನಿ..' ಎಂದಳು ರಮ್ಯ.

ರಮ್ಯಾಳ ರೂಮು ವಿಶಾಲವಾಗಿತ್ತು. ಪುಸ್ತಕಗಳ ಕಪಾಟಿನಲ್ಲಿ ಜೀವವಿಜ್ಞಾನಕ್ಕೆ ಸಂಬಂಧಿಸಿದ, ಯೋಗಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳಿದ್ದವು. ದೊಡ್ಡದಾದ ಕಿಟಕಿಯನ್ನು ತೆರೆದರೆ ಮಾವಿನ ತೋಪನ್ನು ನೋಡಬಹುದಿತ್ತು.

'ಅಲ್ನೋಡು ಋತು, ತೋಪಿನಾಚೆ ಬಿಲ್ಡಿಂಗೊಂದು ಸ್ವಲ್ಪವೇ ಕಾಣ್ತಿದೆಯಲ್ಲ, ಅದೇ ಅಪ್ಪಾಜಿಯ ಯೋಗ ಶಾಲೆ, ಅಪ್ಪಾಜಿ ಅಲ್ದೆ ಇನ್ನೂ ಇಬ್ಬರು ಗುರೂಜಿಗಳಿದ್ದಾರೆ ಅಲ್ಲಿ, ಯೋಗಶಾಲೆಯ ಜೊತೆಗೆ ಒಂದು ಆಯುರ್ವೇದ ವೈದ್ಯ ಶಾಲೆಯೂ ಇದೆ. ಅಲ್ಲಿಯೂ ಇಬ್ಬರು ಡಾಕ್ಟರುಗಳಿದ್ದಾರೆ...' ರಮ್ಯ ಕುಳಿತುಕೊಳ್ಳುತ್ತಾ ಹೇಳಿದಳು.

'ಅಂದ್ರೆ ಯೋಗಶಾಲೆ, ಈ ತೋಪು ಎಲ್ಲಾ ನಿಮ್ದೇನೇ ರಮ್ಯ?' ಆಶ್ಚರ್ಯದಿಂದ ಕೇಳಿದಳು ಋತು.

'ಹೂಂ ಕಣೇ ಋತು, ನಾನು ನಾಲ್ಕು ವರ್ಷದವಳಾಗಿದ್ದಾಗ ದೇವಣ್ಣನೊಂದಿಗೆ ನನ್ನನ್ನು ಕರ್ಕೊಂಡು ಇಲ್ಲಿಗೆ ಬಂದ ಅಪ್ಪಾಜಿ ಈ ಮಾವಿನ ತೋಪನ್ನು ಕೊಂಡು ಕೊಂಡ್ರಂತೆ. ಹಾಗೆಯೇ ಅವರು ಪರಿಶ್ರಮದಿಂದ ಕಲಿತ ಯೋಗವನ್ನೂ ಬಿಡಲಿಲ್ಲ. ಅದೇ ಈಗ ದೊಡ್ಡದಾಗಿ ಬೆಳೆದಿದೆ, ಯೋಗ ಶಾಲೆ ಮಾಡುವಷ್ಟು ಮಟ್ಟಿಗೆ.... ಬೆಳಿಗ್ಗೆ ಎರಡು ಬ್ಯಾಚು, ಸಂಜೆ ಎರಡು ಬ್ಯಾಚು ಯೋಗಕ್ಲಾಸುಗಳು ನಡೆಯುತ್ತೆ. ಆಗಾಗ ಕರೆದಲ್ಲಿಗೆ ಹೋಗಿ ಯೋಗ ಶಿಬಿರಗಳನ್ನು ಅಪ್ಪಾಜಿ ನಡೆಸ್ತಾರೆ, ಇವತ್ತು ಹತ್ತಿರದ ಮುದ್ದೇನಹಳ್ಳಿಯಲ್ಲಿ ಶಿಬಿರವಿದೆಯಂತೆ, ಹಿಂದಿರುಗಿ ಬರುವಾಗ ರಾತ್ರಿಯಾದ್ರೂ ಆಗ್ಬಹುದು..' ರಮ್ಯ ಸಹಜವಾಗಿ ಮಾತನಾಡಿದಾಗ ಆಶ್ಚರ್ಯ ಪಡುವ ಸರದಿ ಋತುವಿನದು. ಅವಳು ಆಗಾಗ ನಂದಿಯಲ್ಲಿ ತನ್ನ ತಂದೆ ಯೋಗ ಗುರುಗಳಾಗಿರುವ ಬಗ್ಗೆ ಹೇಳಿದ್ದಳಾದರೂ ಅವರು ಈ ಮಟ್ಟಕ್ಕೆ ಸ್ಥಿತಿವಂತರಾಗಿರಬಹುದೆಂಬ ಕಲ್ಪನೆಯೂ ಅವಳಿಗಿರಲಿಲ್ಲ. ಜೊತೆಗೆ ರಮ್ಯ ಯಾವಾಗಲೂ ಸರಳವಾಗಿಯೇ ಅಲಂಕರಿಸಿಕೊಳ್ಳುತ್ತಿದ್ದಳು. ಸರಳವಾದ ಕಾಟನ್ ಬಟ್ಟೆಗಳನ್ನೇ ಹೆಚ್ಚಾಗಿ ಧರಿಸುತ್ತಿದ್ದುದರಿಂದ ಅವರು ಆರ್ಥಿಕವಾಗಿ ಅಷ್ಟೇನೂ ಸ್ಥಿತಿವಂತರಲ್ಲವೆಂದೇ ಅಂದುಕೊಂಡಿದ್ದಳು. ಆದರೀಗ.... ಹುಬ್ಬೇರಿಸುವಷ್ಟು ಸ್ಥಿತಿವಂತಳಾಗಿದ್ದಾಳೆ ಅವಳು. ಆದರೂ ಒಂದು ದಿನವೂ ತನ್ನ ಬಗ್ಗೆ ಹಿರಿದಾಗಿ ಹೇಳಿಕೊಳ್ಳದ ಅವಳ ಸರಳತೆ ಋತುವಿನಲ್ಲಿ ಅಚ್ಚರಿಯನ್ನು ಹುಟ್ಟು ಹಾಕಿತ್ತು. ಒಣ ಜಂಬ, ಅರ್ಥವಿಲ್ಲದ ಆಡಂಬರವನ್ನು ಪ್ರದರ್ಶಿಸುವ ಜನರ ಮಧ್ಯೆ ರಮ್ಯ ಅಪರೂಪವಾಗಿ ಕಂಡಳು. ಅಂಥ ಚಿನ್ನದಂತಹ ಗುಣದ ಗೆಳತಿಯ ದಾಂಪತ್ಯವೇಕೆ ಮುರಿದು ಬಿದ್ದಿರಬಹುದು? ಯಾವ ದುರಂತದ ಕರಿನೆರಳು ಅವಳ ಬದುಕನ್ನು ಆವರಿಸಿರಬಹುದು? ಯೋಚಿಸಲಾರದೆ ಸೋತಳು.

ತಾವು ಸುರಕ್ಷಿತವಾಗಿ ತಲುಪಿದ ಬಗ್ಗೆ ತಂದೆಗೊಂದು ಮೆಸೇಜ್ ಮಾಡಿದಳು. ಕಲಾವತಿಯಿಂದ ಯಾವುದೇ ಕರೆ ಬರಲಿಲ್ಲ. ಋತು ಅದನ್ನು ನಿರೀಕ್ಷಿಸಿಯೂ ಇರಲಿಲ್ಲ. ಸ್ವಲ್ಪ ಹೊತ್ತಿಗೆ ದೇವಣ್ಣ ಬಂದು ಗೆಳತಿಯರನ್ನು ಊಟಕ್ಕೆಬ್ಬಿಸಿದ್ದ. ಅವನ ಕೈ ಅಡುಗೆ ಅದ್ಭುತವಾಗಿತ್ತು.

ಊಟ ಮುಗಿಸಿಕೊಂಡು ಇಬ್ಬರೂ ತೋಪಿನ ತುಂಬೆಲ್ಲಾ ಓಡಾಡಿದರು. ದೇವಣ್ಣ ಮನೆಯ ಹಿಂಭಾಗದಲ್ಲಿ ಒಳ್ಳೆಯ ಹಿತ್ತಲನ್ನೇ ಮಾಡಿಕೊಂಡಿದ್ದ. ಎಲ್ಲ ತರಕಾರಿಗಳನ್ನೂ ಅವನೇ ಸ್ವತಃ ಬೆಳೆಯುತ್ತಿದ್ದುದರಿಂದ ಹಿತ್ತಲು ಹಸಿರಿನಿಂದ ನಳನಳಿಸುತ್ತಿತ್ತು.

'ದೇವಣ್ಣ ಹಸಿಮೆಣಸಿನಕಾಯಿಯನ್ನೂ ಹೊರಗಡೆಯಿಂದ ತರುವುದಿಲ್ಲ ಋತು, ಆದಷ್ಟೂ ತರಕಾರಿಗಳನ್ನು ಹಿತ್ತಲಿನಲ್ಲಿಯೇ ಬೆಳೆದುಕೊಳ್ಳುತ್ತಾನೆ, ಯಾವುದೋ ಅಪರೂಪವಾದ ತರಕಾರಿಗಳು ಮಾತ್ರ ಪೇಟೆಯಿಂದ ಬರುತ್ತವಷ್ಟೇ, ಮಾವಿನ ಸೀಸನ್ನಿನಲ್ಲಿ ಅಪ್ಪಾಜಿ ಮಾವಿನ ಹಣ್ಣುಗಳಿಗೆ ಕಾಂಟ್ರಾಕ್ಟ್ ಕೊಟ್ಟು ಬಿಡ್ತಾರೆ, ಸಾಕಷ್ಟು ಹಣ್ಣುಗಳನ್ನು ಯೋಗ ವಿದ್ಯಾರ್ಥಿಗಳಿಗೂ ಹಂಚುತ್ತಾರೆ...' ಎಂದಳು ರಮ್ಯ. ಇಬ್ಬರೂ ಸಂಜೆಯಾಗುವವರೆಗೂ ತೋಪಿನಲ್ಲಿ ಅಡ್ಡಾಡಿದರು.

'ಅಪ್ಪಾಜಿಯ ಜೊತೆ ಯೋಗ ಶಾಲೆಗೆ ಹೋಗ್ಬರೋಣ ಋತು, ಮಾವಿನ ತೋಪು ದಾಟಿದ್ಮೇಲೆ ಯೋಗಶಾಲೆಯಿದೆ ಅಂತ ಹೇಳಿದ್ನಲ್ಲ, ಆದ್ರೆ ಅಪ್ಪಾಜಿ ಎರಡರ ಮಧ್ಯೆ ಎತ್ತರವಾದ ಕಾಂಪೌಂಡ್ ಕಟ್ಟಿಸಿ ಬಿಟ್ಟಿದ್ದಾರೆ, ಹೋಗುವುದಾದರೆ ರೋಡಿನಲ್ಲೇ ಹೋಗಿ ಬರ್ಬೇಕು....' ಎಂದ ರಮ್ಯಾಳ ಮಾತಿಗೆ ಋತು ತಲೆಯಾಡಿಸಿದಳು.

'ಬಾ ಋತು, ಸ್ವಲ್ಪ ಹೊತ್ತು ಟೆರೇಸ್ ಮೇಲೆಯೂ ಅಡ್ಡಾಡಿ ಬರೋಣ, ನಾನು ಇಲ್ಲಿಗೆ ಬಂದ್ರೆ ಹೀಗೆಯೇ, ಓಡಾಡಿಕೊಂಡು ಇರ್ತೀನಿ...' ಚುರುಕಾಗಿ

## ಖಾಲಿ ಬಾಟಲಿ

ಕೆರೆ ಬಾವಿಗಳು
ತುಂಬಿಹೋಗಿವೆ,
ಖಾಲಿ ನೀರಿನ
ಬಾಟಲಿಯಿಂದ!

★ ಬಾಲು ಪಟಗಾರ

